ರಾಜ್ಯದಲ್ಲಿ ಅಂತ್ಯೋದಯ ಯೋಜನೆ

೬೪೭ ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕಿನಲ್ಲಿ ಅಂತ್ಯೋದಯ ಯೋಜನೆಯನ್ನು ಜಾರಿಗೊಳಿಸಿದೆ

ಆ) ಈ ತನಕ ಅಂತ್ಯೋದಯ ಯೋಜನೆಗೆ ಸಹಾಯಧನ ನೀಡಲು ಪ್ರತಿವರ್ಷ ಎಷ್ಟು ಹಣವನ್ನು ಬಳಸಬೇಕಾಯಿತು ?

ಇ) ರಾಜ್ಯದಲ್ಲಿ ಒಟ್ಟಿಗೆ ಎಷ್ಟು ಜನ ಫಲಾನುಭವಿಗಳನ್ನು ಈ ಯೋಜನೆಯಡಿಯಲ್ಲಿ ಈ ತನಕ ಗುರುತಿಸಲಾಯಿತು ?

ಈ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ೧೯೮೬–೮೭ನೇ ವರ್ಷಕ್ಕೆ ಅಂತ್ಯೋದಯ ಯೋಜನೆ ಯಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಯಿತು, ಹಾಗೂ ದಿನಾಂಕ ೩೧–೩–೧೯೮೭ಕ್ಕೆ ಎಷ್ಟು ಜನಕ್ಕೆ ಸಾಲ ನೀಡಲಾಯಿತು ?

ಎ) ೧೯೮೬-೮೭ನೇ ವರ್ಷಕ್ಕೆ ಕೊಡಬೇಕಾದ ಅಂತ್ಯೋದಯ ಯೋಜನೆಯ ಸಾಲ ಈ ತನಕ ಎಷ್ಟು ಜನರಿಗೆ ಕೊಡುವುದು ಬಾಕಿ ಇದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ರಾಜ್ಯದಲ್ಲಿ ೭೫ ತಾಲ್ಲೂಕುಗಳಲ್ಲಿ ಜಾರಿಯಲ್ಲಿದೆ,

ಆ)	೧೯೮೪–೮೫	೮೫–೮೬	೮೬-೮೭	೮೭–೮೮
	ರೂ. ೨೦೦. ೦೦ ಲಕ್ಷಗಳು	ರೂ. ೧೭೪.೨೫೦ ಲಕ್ಷಗಳು	ರೂ. ೧೭೪.೦೦ ಲಕ್ಷಗಳು	ರೂ. ೧೫೫,೦೦ ಲಕ್ಷಗಳು

ಇ) ರಾಜ್ಯದಲ್ಲಿ ಒಟ್ಟಿಗೆ ೬೩,೮೭೫ ಜನ ಫಲಾನುಭವಿಗಳನ್ನು ಈ ಯೋಜನೆಯಡಿಯಲ್ಲಿ ಈ ತನಕ ಗುರುತಿಸಲಾಯಿತು.

ಈ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ೧೯೮೬–೮೭ನೇ ಅಂತ್ಯೋದಯ ಯೋಜನೆ ಯಡಿಯಲ್ಲಿ ೨೨೧ ಫಲಾನುಭವಿಗಳನ್ನು ಗುರುತಿಸಲಾಯಿತು. ೧೪೦ ಫಲಾನುಭವಿಗಳಿಗೆ ಸಾಲ ರೂ. ೨.೬೪ ಲಕ್ಷ ನೀಡಲಾಯಿತು,

ಎ) ೧೯೮೬–೮೭ನೇ ವರ್ಷಕ್ಕೆ ಕೊಡಬೇಕಾದ ಅಂತ್ಯೋದಯ ಯೋಜನೆಯ ಸಾಲ ೩,೩೨೪ ಜನರಿಗೆ ಕೊಡುವುದು ಬಾಕಿ ಇದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಶ್ವೇತ ಪತ್ರ.

೧೫೫. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ವಾರ್ತಾ ಪ್ರವಾಸೋದ್ಯಮ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಶ್ವೇತ ಪತ್ರದಲ್ಲಿ ಆಪಾದಿಸಲಾಗಿರುವವ ಹೆಸರುಗಳೇನು ?

ಆ) ಆಪಾದಿತರ ವಿರುದ್ಧ ಆಪಾದನೆ ಹೊರಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ ?

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ, ವಾರ್ತಾ ಪ್ರವಾಸೋದ್ಯಮ ಸಚಿವರು).—

ಅ) ಶ್ವೇತ ಪತ್ರದಲ್ಲಿ ಯಾರನ್ನೂ ಅವರ ಹೆಸರಿನಲ್ಲಿ ಆಪಾದಿಸಿರುವುದಿಲ್ಲ.

ಆ) ಶ್ವೇತ ಪತ್ರವು ಪ್ರಾಧಿಕಾರದಲ್ಲಿ ಕಂಡು ಬಂದಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಸರಿಯಾದ ಮಾರ್ಗದಲ್ಲಿ ಕಾರ್ಯ ನಿರ್ವಹಿಸಲು ಮಾರ್ಗದರ್ಶನ ನೀಡುವ ವಾಸ್ತವಿಕ ವರದಿಯ ರೂಪದಲ್ಲಿರುತ್ತದೆ. ಅದು ತನಿಖಾ ಅಥವಾ ವಿಚಾರಣಾ ವರದಿಯಲ್ಲ ಆದುದರಿಂದ ಆಪಾದನೆ ಹೊರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 'ಆ'ನಲ್ಲಿ ಉತ್ತರಿಸಿದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಪ್ರಶ್ನೆಗಳನ್ನು ಆಯ್ಕೆ ಮಾಡತಕ್ಕ ಕಾಲದಲ್ಲಿ ಅಂತಿಮ ಪಟ್ಟಿಯಲ್ಲಿ ನನ್ನ ಪ್ರಶ್ನೆ ಇದೆ. ಇದು ಸರಳವಾದ ಪ್ರಶ್ನೆ ಇದು ಅಚ್ಚು ಹಾಕಿಲ್ಲ. ಪ್ರಶ್ನೆಗಳನ್ನು ಆಯ್ಕೆ ಮಾಡತಕ್ಕ ಕಾಲದಲ್ಲಿ ಯಾವ ರೀತಿ ಆಯ್ಕೆ ಮಾಡಲಾಗುತ್ತದೆ. ದಯಮಾಡಿ ತಿಳಿಸಬೇಕು.

(ಗೊಂದಲ)

ಅಧ್ಯಕ್ಷರು.—ತಾವು ಪ್ರತಿನಿತ್ಯ ಇದೇ ರೀತಿ ಮಾಡುವುದು ಸರಿಯಲ್ಲ. ದಯಮಾಡಿ ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ,—ಅಧ್ಯಕ್ಷರೆ, ಸಾರ್ವಜನಿಕ ಮಹತ್ವದ ಪ್ರಶ್ನೆಗಳನ್ನು ಕೊಟ್ಟಿರುತ್ತೇವೆ,

(ಗೊಂದಲ)

ಅಧ್ಯಕ್ಷರು.—ಈ ರೀತಿ ಗದ್ದಲ ಮಾಡುವುದು ತಮಗೆ ಸರಿಯಲ್ಲ, ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ದಿನಾಂಕ ೨೫–೧–೧೯೮೮ರಂದು ಸದನವು ಸಭೆ ನಡೆಸದ ಕಾರಣ ಆ ದಿನದ ಚುಕ್ಕೆ ಗುರುತಿನ ಹಾಗೂ ಪ್ರಶ್ನೆಗಳ ಉತ್ತರಗಳನ್ನು ಚುಕ್ಕೆ ಗುರುತಿಲ್ಲದ ಮೂರನೆಯ ಪಟ್ಟಿಯ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರಗಳನ್ನು ಸಭೆಯ ಮುಂದಿಡಲಾಯಿತು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಈ ರೀತಿ ವ್ಯತ್ಯಾಸ ಆಗಬಾರದು.

ಅಧ್ಯಕ್ಷರು.—ತಾವು ಇನ್ನೊಂದು ದಿವಸ ಹಾಕಿ ಉತ್ತರ ಕೊಡಿಸುತ್ತೇನೆ. ದಯಮಾಡಿ ಈಗ ತಾವು ಕುಳಿತುಕೊಳ್ಳಬೇಕು.